ಪ್ರಧಾನ ದಿವಾಣಿ ನ್ಯಾಯಾಧೀಶರು ಹಾಗೂ ಜೆಎಮ್‌ಎಫ್‌ಸಿ ನ್ಯಾಯಾಲಯ, ಹುಬ್ಬಳ್ಳಿ
ಸಿ ಸಿ ನಂ.226/2012

| | | | | | |
|---|---|---|---|---|---|
| ಸಾಕ್ಷಿದಾರರ ಹೆಸರು | : | ದಿಲಾವರಸಾಬ ನಧಾಪ | ಪಿಡಬ್ಲೂ | : | 28 |
| ತಂದೆಯ ಹೆಸರು | : | ಜಂಗ್ಲಿಸಾಬ | ಸಿಡಬ್ಲೂ | : | 51 |
| ವಯಸ್ಸು | : | 78 ವರ್ಷ | | | |
| ಉದ್ಯೋಗ | : | -- | | | |
| ವಾಸ ಸ್ಥಳ | : | ಮದಿಹಾಳ, ಧಾರವಾಡ | | | |

ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣಿಕರಿಸಿದ ದಿನಾಂಕಃ 07/02/2020

ಮುಖ್ಯ ವಿಚಾರಣೆ ಎಪಿಪಿ ಯವರಿಂದ ಃ

ನಾನು ಧಾರವಾದಡ ಕುಮಾರೇಶ್ವರ ಕಾಲೋನಿಯಲ್ಲಿ ಕಳೆದ 22 ವರ್ಷಗಳಿಂದ ವಾಸವಾಗಿರುತ್ತೇನೆ. ಸದರಿ ಕುಮಾರೇಶ್ವರ ಕಾಲೋನಿಯಲ್ಲಿ ಮಹಾನಗರ ಪಾಲಿಕೆಯಿಂದ ಸಿವಿಕ್ ಕಮ್ಯುನಿಟಿ ಪ್ಲಾಟಗಳು ಅಸ್ತಿತ್ವದಲ್ಲಿದ್ದವು. ಈಗ 15 ವರ್ಷಗಳ ಹಿಂದೆ ರಸ್ತೆ ಡಾಂಬರಿಕರಣ ಆಗಿದ್ದರ ಕುರಿತು ಇಂಜನೀಯರಗಳು ಕೇಳಿದಾಗ ನಾವೆಲ್ಲ ಆಗಿದ್ದಾವೆ ಅಂತಾ ಹೇಳಿದೇವು. ಈ ಪ್ರಕರಣದಲ್ಲಿ ನನಗೆ ಯಾವುದೇ ವೈಯಕ್ತಿಕ ಮಾಹಿತಿ ಇಲ್ಲ. ಹುಬ್ಬಳ್ಳಿ ಉಪನಗರ ಪೊಲೀಸ ಠಾಣೆಯಲ್ಲಿ ನಮ್ಮನ್ನು ಕರೆಯಿಸಿ ವಿಚಾರಣೆ ಮಾಡಿದ್ದರು. ಆ ಸಂದರ್ಭದಲ್ಲಿ ನಾನು ಈಗ ಮೇಲೆ ಹೇಳಿದ ವಿಚಾರಣವನ್ನೇ ಪೊಲೀಸರಿಗೆ ಹೇಳಿದ್ದೆ.

(ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಅಂತಾ ಪರಿಗಣಿಸಿ ಪಾಟೀ ಸವಾಲು ಮಾಡಲು ಸಸಅ ಅವರು ಅನುಮತಿ ಕೋರಿರುತ್ತಾರೆ. ಅನುಮತಿಯನ್ನು ನೀಡಲಾಯಿತು)

ಪಾಟೀ ಸವಾಲು ಎಪಿಪಿ ಯವರಿಂದ ಃ

2000 ಇಸ್ವಿಗಿಂತ ಒಂದು ವರ್ಷ ಹಿಂದೆ ಕುಮಾರೇಶ್ವರ ಕಾಲೋನಿಯಲ್ಲಿ ಮಹಾನಗರ ಪಾಲಿಕೆ ವತಿಯಿಂದ ರಸ್ತೆಗೆ ಮೊಹರಂ ಹರಡುವುದಾಗಿ ಅಥವಾ ಕಾಮಗಾರಿ ಆರಂಭ ಆಗಿರುವುದಿಲ್ಲ. ಅದರಂತೆ ಹೊಸ ರಸ್ತೆ ಆಗಿರುವುದಿಲ್ಲ ಎಂದು ನಾನು ನನ್ನ ವಿಚಾರಣೆಯಲ್ಲಿ ಪೊಲೀಸರ ಮುಂದೆ ಹೇಳಿದ್ದೆ ಎಂದರೆ ಸರಿಯಲ್ಲ.

ಆರೋಪಿತರು ಮಹಾನಗರ ಪಾಲಿಕೆಯನ್ನು ದುರುಪಯೋಗ ಮಾಡಿಕೊಂಡಿದ್ದರು ಎಂದು ಮಾಹಿತಿಯನ್ನು ಪೊಲೀಸರ ಮುಂದೆ ಹೇಳಿದ್ದೆ ಎಂದರೆ ಸರಿಯಲ್ಲ. ಅದರಂತೆ ಈಗ ಓದಿ ಹೇಳಿದಂತೆ ನಿಪಿ.27 ರಂತೆ ನಾನು ಪೊಲೀಸರ ಮುಂದೆ ಹೇಳಿಕದೆ ನೀಡಿದ್ದೆ ಎಂದರೆ ಸರಿಯಲ್ಲ. ಆರೋಪಿತರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲು : ಆರೋಪಿಗಳ ಪರ ವಕೀಲರಿಂದಃ

ಪಾಟೀ ಸವಾಲು ಇಲ್ಲವೆಂದು ತಿಳಿಸಿರುತ್ತಾರೆ.

ಮರು ವಿಚಾರಣೆ : ಇಲ್ಲ

(ನನ್ನ ಹೇಳಿಕೆ ಪ್ರಕಾರ ಬೆರಳಚ್ಚುಗಾರರಿಂದ ತೆರೆದ ನ್ಯಾಯಾಲಯದಲ್ಲಿ ಕಂಪ್ಯೂಟರದಲ್ಲಿ ಮುದ್ರಿಸಲಾಯಿತು)

ಓ ಹೇ ಕೆ ಸರಿ ಇದೆ,

ಪ್ರಧಾನ ದಿವಾಣಿ ನ್ಯಾಯಾಧೀಶರು
ಹಾಗೂ ಜೆ ಎಮ್ ಎಪ್ , ಹುಬ್ಬಳ್ಳಿ.